ಮಾಡತಕ್ಕ ಕಾರ್ಯಕ್ರಮ ರೂಪಿಸುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೇ, ನಮ್ಮ ಭಾಗದಲ್ಲಿಯೂ ಈ ಬ್ಯಾಕ್‌ವರ್ಡ್ ಕ್ಲಾಸಸ್ ಜನರು ಬೇಕಾದಷ್ಟು ಇದ್ದಾರೆ. ಅಲ್ಲಿಯೂ ಕೂಡ ಏನು ಮಾಡಿಲ್ಲವೆಂಬುದನ್ನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಬ್ಯಾಕ್‌ವರ್ಡ್ ಕ್ಲಾಸ್ ಜನಗಳನ್ನು ಇಂಪ್ರೂವ್‌ಮೆಂಟ್ ಮಾಡುವುದು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ಮಂತ್ರಿಗಳು ಹೇಳಬೇಕು. ನಮ್ಮ ಕೆ.ಜಿ.ಎಫ್ ಕಡೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ, ಮೈನಾರಿಟೀಸ್‌ಗೆ ಏನೂ ಆಗುತ್ತಾ ಇಲ್ಲ. ಇದಕ್ಕೆ ಏನಾದರೂ ಮಾಡಿಕೊಡುತ್ತೀರಾ?

ಶ್ರೀ ಎಂ. ವಿ. ಗುತ್ತೇದಾರ್ : ತಾವು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಏಕೆಂದರೆ, ಜಿಲ್ಲಾವಾರು ಮಾಹಿತಿ ನಾನು ತಂದಿಲ್ಲ. ನಿಮ್ಮ ಜಿಲ್ಲೆಯಲ್ಲೂ ಈ ಯೋಜನೆಗಳನ್ನು ಅಳವಡಿಸಿದ್ದೇನೆ. ಕೋಲಾರ ಜಿಲ್ಲೆಯಲ್ಲೂ ಕೂಡ ಸಾಕಷ್ಟು ಕೊಟ್ಟಿದ್ದೇವೆ. ತಾವು ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ, ಅಂಕಿಅಂಶಗಳ ಸಹಿತ ಉತ್ತರವನ್ನು ತರಿಸಿ ಕೊಡುತ್ತೇನೆ.

ಉಪಾಧ್ಯಕ್ಷರು : ಅವರ ಹತ್ತಿರ ಸದ್ಯಕ್ಕೆ ಮಾಹಿತಿ ಇಲ್ಲ. ನೀವು ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿ, ನಂತರ ಉತ್ತರ ಹೇಳುತ್ತಾರೆ.

ವಿಷಯ : ಕೋಲಾರದಲ್ಲಿ "ಕಾರ್ಗೋ" ಏರ್‌ಪೋರ್ಟ್ ಸ್ಥಾಪನೆಯ ಪ್ರಸ್ತಾವನೆ.

235 (2014)-ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೋಲಾರದಲ್ಲಿ ಕಾರ್ಗೊ ಕಾಂಪ್ಲೆಕ್ಸ್ ಸ್ಥಾಪನೆಯ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?

ಆ) ಇದ್ದರೆ, ಅದನ್ನು ಖಾಸಗಿ, ಸಾರ್ವಜನಿಕ ಜಂಟಿ ವಲಯದಲ್ಲಿ ಬರುವುದೇ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು)

ಅ) ಸದ್ಯಕ್ಕೆ ಯಾವುದೇ ಪ್ರಸ್ತಾವನೆಯು ಈ ಬಗ್ಗೆ ಸರ್ಕಾರದ ಮುಂದೆ ಇಲ್ಲ.

ಆ) ಉದ್ಭವಿಸುವುದಿಲ್ಲ.

SRI S. RAJENDRAN : I have read in the newspaper very clearly that a Cargo Airport is going to be opened in Karnataka State To my question, whether the Government has any proposal to establish a `Cargo Airport' at Kolar, the reply given is: ``At present there is no proposal before the Government'' To my second question: If so, whether it is in private or public or in joint sector?, the reply given is ``Does not arise.''

I would like to know whether this is a Government closed Society or a transparent society. In a transparent society, you have to tell very clearly and specifically whether private people are in this or it is a joint-venture. Am I asking that individal pocket money is going to be invested there? But, I have read in the newspaper that a Cargo airport is going to be opened shortly in the State. I want reply for this.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ಈ ಕಾರ್ಗೋ ಫೆಸಿಲೀಟೀಸ್ ಪ್ರಾರಂಭ ಮಾಡಬೇಕಾದರೆ, ಸಿವಿಲ್ ಎವಿಯೇಷನ್ ಮಿನಿಸ್ಟರ್‌ರವರು ಮಾಡಬೇಕು. ಸಿವಿಲ್ ಎವಿಯೇಷನ್ ಮಿನಿಸ್ಟರ್ ಮುಂದೆ ಯಾವ ತರಹದ ಪ್ರಸ್ತಾವನೆ ಇದೆಯೋ ನಮಗೆ ಗೊತ್ತಿಲ್ಲ. ಅವರು ನಮ್ಮ ಕಡೆಯಿಂದಲೂ ಯಾವುದೇ ಮಾಹಿತಿ ಪಡೆದುಕೊಂಡಿಲ್ಲ. ಕೋಲಾರದಲ್ಲಿ ಕಾರ್ಗೋ ಫೆಸಿಲಿಟೀಸ್ ಪ್ರಾರಂಭ ಮಾಡಬೇಕೆಂದು ರಾಜ್ಯಸರ್ಕಾರವೂ ಸಹ ಶಿಫಾರಸ್ ಮಾಡಿರುವುದು ಗಮನದಲ್ಲಿ ಇಲ್ಲ. ಹಾಗಾಗಿ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದೇನೆ. ಒಂದು ವೇಳೆ ಇದು ಅವಶ್ಯಕತೆ ಇದೆಯೆಂದರೆ, ಇದರ ಬಗ್ಗೆ ಸರ್ವೆ ಬೇಕಾದರೆ ಮಾಡಿಸೋಣ. ಅವಶ್ಯಕತೆ ಇದೆಯೆಂದು ಕಂಡುಬಂದರೆ, ಸರ್ಕಾರ ಪರಿಶೀಲನೆ ಮಾಡಿ ಸಿವಿಲ್ ಎವಿಯೇಷನ್ ಮಿನಿಸ್ಟರಿಗೆ ರೆಕ್‌ಮೆಂಡ್ ಮಾಡುತ್ತೇವೆ.

SRI S. RAJENDRAN : I would like to bring it to your notice, if at all there is any proposal to establish a Cargo airport, that proposal should come to kolar because there is already landing facility and tarmac at Kolar. Facilities are available. As such this should not be

divetted to any other place because industrywise Kolar is Zero Kindly look into the matter and keep in mind that Kolar/district is given an opportunity.

ಶ್ರೀ ಆರ್. ವಿ ದೇಶಪಾಂಡೆ : ಅವರು ಏನೇನು ಹೇಳಿದ್ದಾರೆ, ಅವೆಲ್ಲವನ್ನೂ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು: ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶ ಇದೆ ಎಂಬುದನ್ನು ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶ ಇದೆ. ನಮ್ಮ ಭೈರೇಗೌಡರು ನನ್ನ ಕಿವಿಯಲ್ಲಿ ಹೇಳುತ್ತಿದ್ದರು, ಅಲ್ಲೊಂದು ರನ್‌ವೇ ಕೂಡ ಇದೆ. ನಾನೂ ನೋಡಿದ್ದೇನೆ. ಅಲ್ಲಿ ಅವಕಾಶ ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದೆಲ್ಲಾ ಕೆಲಸ ಸಿವಿಲ್ ಎವಿಯೇಷನ್ ಮಿನಿಸ್ಟರಿಂದ ಆಗಬೇಕಾಗಿದೆ. ನಮಗೆ ಬರೀ ಶಿಫಾರಸ್ಸು ಮಾಡತಕ್ಕ ಅಧಿಕಾರ ಇದೆ. ಅದರೂ ಸಹ, ಅದರ ಬಗ್ಗೆ ಎಲ್ಲಾರ ಸಹಕಾರದಿಂದ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇನೆ.

ವಿಷಯ : ಸೊರಬ ಟೌನಿನಲ್ಲಿ ಕುಡಿಯುವ ನೀರಿನ ಸಮಸ್ಯೆ.

236 (1955) ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸೊರಬ ಟೌನಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಬಿ. ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಈ ಪಟ್ಟಣಕ್ಕೆ ಶಿವಮೊಗ್ಗ ಜಿಲ್ಲಾ ಪಂಚಾಯತ್‌ವತಿಯಿಂದ ರೂ. 2.86 ಲಕ್ಷ ರೂ.ಗಳಿಗೆ ಒಂದು ನೀರು ಸರಬರಾಜು ಯೋಜನೆಯನ್ನು. ತಯಾರಿಸಿದ್ದು ಈ ಯೋಜನೆಯು ಸದ್ಯದಲ್ಲಿ ಪ್ರಗತಿಯಲ್ಲಿದೆ.ಈ ಯೋಜನೆಯಲ್ಲಿ ದಂಡವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡಲಾಗುತ್ತಿದ್ದು ಈ ಕೆಲಸಕ್ಕೆ ಈಗಾಗಲೇ ಜಿಲ್ಲಾ ಪಂಚಾಯತ್‌ನವರು